# ಕಾಳಿ ಮಡಿಲಲ್ಲಿ ಮೈಮರೆತ ಕ್ಷಣ



ಈಜು ಬರದ ನಾವು ನೀರ ಜೊತೆ ಸೆಣಸಿದ ರೋಮಾಂಚನ ಕ್ಷಣ ಇಂದಿಗೂ ನಮ್ಮನ್ನು ಭಾವೋದ್ವೇಗಗೊಳಿಸುತ್ತದೆ.

■ ಲೀಲಾ ವಿಶ್ವನಾಥ್, ಮೈಸೂರು

ನಾವು ಮೈಸೂರಿನ ಮಹಿಳೆಯರು, ಪ್ರವಾಸ ಹೋಗುವುದು ನಮ್ಮ ಒಂದು ಹವ್ಯಾಸವಾಗಿದೆ. ಭಾರತವಲ್ಲದೆ ವಿದೇಶಗಳಿಗೂ ನಾವು ಮಹಿಳೆಯರೇ ಪ್ರವಾಸ ಮಾಡಿದ್ದೇವೆ. ಇದು ಸುಮಾರು 11 ವರ್ಷಗಳಿಂದ ನಡೆದುಕೊಂಡು ಬಂದಿದೆ. ಅನೇಕ ಪ್ರವಾಸಗಳಲ್ಲಿ ನಮ್ಮ ಮನಸ್ಸಿಗೆ ಅತ್ಯಂತ ಸಂತೋಷ ಹಾಗೂ ಮಧುರವಾದ ನೆನಪು ಇರುವುದು ಕಾಳಿ ನದಿಯಲ್ಲಿ ಮಾಡಿದ ರಿವರ್ ರ್‍ಯಾಫ್ಟಿಂಗ್ ಅನುಭವ.

2012 ಜನವರಿ ಮೊದಲ ವಾರದಲ್ಲಿ ಗೋವಾ ಪ್ರವಾಸ ಮುಗಿಸಿ ವಾಪಸ್ಸು ಬರುವಾಗ ದಾಂಡೇಲಿಯಲ್ಲಿ ವಿಮಲ ಗಾರ್ಡನ್ ಎಂಬ ಹೋಮ್‌ಸ್ಟೇಯಲ್ಲಿ ಉಳಿದುಕೊಂಡಿದ್ದೆವು. ಅಲ್ಲಿ ತಿಂಡಿ, ಊಟ ಎಲ್ಲಾ ವ್ಯವಸ್ಥೆಯೂ ಅಚ್ಚುಕಟ್ಟಾಗಿತ್ತು. ನಮಗೆ ಅಡ್ವೆಂಚರ್‌ಗಳಾದ ರ್‍ಯಾಫ್ಟಿಂಗ್ ಬಗ್ಗೆ ಆಸಕ್ತಿ ಇತ್ತು, ಅದರಂತೆ ಅದನ್ನೇ ಮಾಡೋಣವೆಂದು ಮಾತನಾಡಿಕೊಂಡು ಅಲ್ಲಿನ ಮಾಲೀಕರಿಗೆ ಹೇಳಿದೆವು. ಅವರು ಬೆಳಿಗ್ಗೆ 8.30ಕ್ಕೆಲ್ಲಾ ತಿಂಡಿ ತಿಂದು ರೆಡಿಯಾಗಿರಿ ಬರುತ್ತೇನೆ ಎಂದು ಹೇಳಿ ಹೋದರು. ನಾವು ರೆಡಿಯಾಗಿದ್ದೆವು. ಅವರು 'ನಿಮ್ಮ ವಾಹನವನ್ನು ರ್‍ಯಾಫ್ಟಿಂಗ್ ಹೊರಡುವ ಜಾಗಕ್ಕೆ ಬಿಡುವುದಿಲ್ಲ, ಅಲ್ಲಿಗೆ ಅವರ ಜೀಪಿನಲ್ಲಿ ಹೋಗಬೇಕು' ಎಂದು ಅವರ ಜೀಪಿನಲ್ಲಿ ಕರೆದುಕೊಂಡು ಹೋದರು. ನಾವೆಲ್ಲಾ ಉತ್ಸಾಹದಿಂದ ಹೊರಟೆವು. ಅಲ್ಲಿ ಚೆಕ್‌ಪೋಸ್ಟ್ ತರಹ ಇತ್ತು, ಅಲ್ಲಿ ನಮ್ಮ ವಿವರಗಳನ್ನು ಕೇಳಿ ಬರೆದುಕೊಂಡರು. ನಮ್ಮ ವಯಸ್ಸು ಎಲ್ಲಾ ಕೇಳಿ ನಮ್ಮ ಹತ್ತಿರ ಸಹಿ ಹಾಕಿಸಿಕೊಂಡರು. ನಾವೆಲ್ಲಾ 50 ರಿಂದ 55 ರೊಳಗಿನ ವಯಸ್ಸಿನ ಮಹಿಳೆಯರು.

ನಮ್ಮನ್ನು ಕೌಶಿಕ್ ಎಂಬ ಗೈಡ್ ಕರೆದುಕೊಂಡು ಹೊರಟರು. ನಮಗೆಲ್ಲಾ ಲೈಫ್ ಜಾಕೆಟ್, ಹೆಲ್ಮೆಟ್ ಹಾಗೂ ಹಾಯಿಗೋಲು ಕೊಟ್ಟು ಕರೆದುಕೊಂಡು ಬೋಟ್ ಬಳಿ ಬಂದು 10 ನಿಮಿಷ ನಮಗೆ ಹೇಗೆ ಮಾಡಬೇಕು ಎಂಬುದರ ಬಗ್ಗೆ ಮಾಹಿತಿ, ಸಲಹೆ ಹಾಗೂ ಸೂಚನೆಗಳನ್ನು ನೀಡಿದರು. ಬೋಟ್‌ಗೆ ಸೇರಿದ ಹಾಗೆ ಹಗ್ಗ ಇತ್ತು, ಅದನ್ನು ಅಗತ್ಯ ಬಂದಾಗ ಗಟ್ಟಿಯಾಗಿ ಹಿಡಿದುಕೊಳ್ಳಬೇಕು ಎಂದು ಎಚ್ಚರಿಕೆ ನೀಡಿದರು. ನಂತರ ನಿಮ್ಮಲ್ಲಿ ಯಾರಿಗಾದರೂ ಈಜು ಬರುತ್ತದೆಯಾ ಎಂದು ವಿಚಾರಿಸಿದರು, ನಾವು ಇಲ್ಲ ಎಂದು ಹೇಳಿದೆವು. ನಂತರ ಯಾರಾದರೂ ನೀರಿಗೆ ಧುಮುಕುತ್ತೀರಾ ನೋಡೋಣ ಎಂದರು. ನಮ್ಮ ತಂಡದ ಧೈರ್ಯಶಾಲಿ ರೂಪ ದಢಕ್ ಎಂದು ನೀರಿಗೆ ಧುಮುಕಿದರು. ಇದು ಆತ ನಮ್ಮನ್ನು ಪರೀಕ್ಷಿಸಿದ ವಿಧಾನ. ಆ ಮೇಲೆ ಆತನಿಗೆ ನಮ್ಮನ್ನು ಕರೆದುಕೊಂಡು ಹೋಗಲು ಉತ್ಸಾಹ ಬಂತು.

ಕಾಳಿ ನದಿಯಲ್ಲಿ ಸುಮಾರು 9 ಕಿ.ಮೀ. ರಿವರ್ ರ್‍ಯಾಫ್ಟಿಂಗ್ ಇತ್ತು, ಇದರಲ್ಲಿ 9 ರ್‍ಯಾಪಿಡ್‌ಗಳಿದ್ದವು (ರ್‍ಯಾಪಿಡ್ ಎಂದರೆ ನೀರು ಅತ್ಯಂತ ರಭಸವಾಗಿ ಹರಿಯುವ ಜಾಗ) ನಾವು ಅದನ್ನು ಎದುರಿಸಬೇಕಾಗಿತ್ತು. ರಭಸದಿಂದ ಹರಿಯುವ ನೀರಿನಲ್ಲಿ ಹೋಗುವುದು ಅದ್ಭುತವಾದ ಅನುಭವ. ಹೀಗೆ ರ್‍ಯಾಪಿಡ್‌ಗಳು ಬಂದಾಗ ಕೂಗುತ್ತ, ಖುಷಿಯಾಗಿ ನಗುತ್ತಾ ಇನ್ನೇನು ಮುಗಿಯುವ ಹಂತ ಬಂದಿತ್ತು. ಕೊನೆಯದಾಗಿ ಮತ್ತೊಂದು ರ್‍ಯಾಪಿಡ್ ಎದುರಾಯಿತು. ಅದನ್ನು ನಾವು ಸಮರ್ಥವಾಗಿ ಎದುರಿಸಿದೆವು. ಇನ್ನೇನು ಮುಗಿಯುತ್ತದಲ್ಲ ಎಂದು ಮತ್ತೊಂದು ಸಲ ಮಾಡಿಸಿದರು. ನಂತರ ಈಗ ಬೇಕಾದರೆ ನೀವೆಲ್ಲಾ ಸ್ಥಳ ಬದಲಾಯಿಸಿಕೊಳ್ಳಿ ಎಂದು ಹೇಳಿದರು. ಅದರಂತೆ ಮುಂದೆ ಕುಳಿತಿದ್ದ ನಾನು ಮತ್ತು ರೂಪ ಹಿಂಭಾಗಕ್ಕೆ ಹೋದೆವು. ಹಿಂದೆ ಕುಳಿತಿದ್ದ ಕುಸುಮ ಮತ್ತು ಪಂಕಜ ಮುಂದೆ ಬಂದು ಕುಳಿತರು. ಮಧ್ಯೆ ಕುಳಿತಿದ್ದ ಸಿದ್ದೇಶ್ವರಿ ಹಾಗೂ ಜಯಲಕ್ಷ್ಮಿ ಜಾಗ ಬದಲಾಯಿಸಲಿಲ್ಲ. ಮತ್ತೆ ಕೊನೆಯ ರ್‍ಯಾಪಿಡ್ ಮಾಡಿಸಿದರು. ಆದರೆ ಕುಸುಮ ಯಾವುದೋ ಗಮನದಲ್ಲಿ ಅಥವಾ ನೀರಿನ ರಭಸದಿಂದ ಹಗ್ಗವನ್ನು ಬಿಟ್ಟು ಬಿಟ್ಟಿದ್ದಾರೆ. ರ್‍ಯಾಪಿಡ್ ನಂತರ ನೋಡಿದರೆ ಕುಸುಮ ಬೋಟ್‌ನಲ್ಲಿ ಇಲ್ಲ, ನೀರಿನಲ್ಲಿ ತೇಲುತ್ತಾ ಇದ್ದಾರೆ. ನಮಗೆಲ್ಲಾ ಒಂದು ಕ್ಷಣ ಗಾಬರಿಯಾಗಿ ಎಲ್ಲಾ ಮಾತು ಮರೆತವರ ಹಾಗೆ ಆಯಿತು. ನಾವು ಹೊರಡುವ ಮೊದಲು ಅವರು ನಮಗೆ ಎಲ್ಲಾ ರೀತಿಯ ಪಾಠವನ್ನು ಹೇಳಿ ಕೊಟ್ಟಿದ್ದು, ಈಗ ಅದು ಅನುಕೂಲಕ್ಕೆ ಬಂದಿತು. ಅದರಂತೆ ಅವರು ಕೈಕಾಲು ಅಗಲಿಸಿಕೊಂಡು ನೀರಿನಲ್ಲಿ ತೇಲುತ್ತಿದ್ದರು. ಒಂದೇ ನಿಮಿಷದಲ್ಲಿ ನಮ್ಮ ಗೈಡ್ ನೀರಿನಿಂದ ಅವರನ್ನು ಎತ್ತಿ ಬೋಟ್‌ಗೆ ಹಾಕಿದರು. ಈ ಅವಘಡ ನಡೆದರೂ, ನಮ್ಮ ಸಂತೋಷಕ್ಕೆ ಭಂಗ ಬರಲಿಲ್ಲ.

ಎಲ್ಲರೂ ಕಾಳಿ ನದಿಯಲ್ಲಿ ಮಿಂದೆದ್ದೆವು. ಕಾಡಿನ ಮಧ್ಯೆ ಹರಿಯುವ ನದಿ, ಅಕ್ಕಪಕ್ಕ ಹಸಿರಿನಿಂದ ಕೂಡಿದ ಬೃಹತ್ ಮರಗಳು, ವಿವಿಧ ಜಾತಿಯ ಪಕ್ಷಿಗಳ ಕಲರವ, ಪ್ರಕೃತಿಯ ಮಡಿಲಲ್ಲಿ ನಾವು ಸ್ವಚ್ಛಂದವಾಗಿ ಎಲ್ಲಾ ಸಂಸಾರ ತಾಪತ್ರಯಗಳನ್ನು ಮರೆತು ಮಕ್ಕಳಂತೆ ಖುಷಿಯಿಂದ ಕುಣಿದು ಕುಪ್ಪಳಿಸಿದ, ಅನುಭವಿಸಿದ ಆ ಮಧುರ ಕ್ಷಣಗಳನ್ನು ಮರೆಯಲು ಸಾಧ್ಯವೇ ಇಲ್ಲ. ವರ್ಷಗಳು ಉರುಳಿದರೂ ಆ ಮಧುರ ನೆನಪು ಮನದಾಳದಿಂದ ಅಳಿಸಿ ಹೋಗುವುದೇ ಇಲ್ಲ. ಅದರ ನೆನಪು ಮನಸ್ಸಿಗೆ ಈಗಲು ಮುದ ನೀಡುತ್ತದೆ. ■